# 20 ಭಾಷೆಗಳಲ್ಲಿ ಪ್ರಧಾನಿ ಜೀವನ ಚರಿತ್ರೆ ಬಿಡುಗಡೆ

- ಬಾಲ್ಯದ ಅಪರೂಪದ ಚಿತ್ರಗಳು, ಕೌತುಕ ಘಟನೆಗಳ ವಿವರಣೆಯು ಉಲ್ಲೇಖ
- ಕನ್ನಡದಲ್ಲಿಯೂ ಲಭ್ಯವಿರಲಿದೆ ಪುಸ್ತಕ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ ಕುರಿತಾದ 'ನರೇಂದ್ರ ಮೋದಿ- ಹರ್ಬಿಂಜರ್ ಆಫ್ ಪ್ರಾಸ್ಪರಿಟಿ ಆ್ಯಂಡ್ ಅಪೋಸ್ಟಲ್ ಆಫ್ ವರ್ಲ್ಡ್ ಪೀಸ್' ಎಂಬ ಜೀವನ ಚರಿತ್ರೆ ಕೃತಿಯನ್ನು ನಿವೃತ್ತ ನ್ಯಾ. ಕೆ.ಜಿ. ಬಾಲಕೃಷ್ಣನ್ ಶನಿವಾರ ಬಿಡುಗಡೆ ಮಾಡಿದ್ದಾರೆ.

ಮೋದಿ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಹಿಡಿದು 6 ವರ್ಷ ಭರ್ತಿಯಾದ ಸ್ಮರಣಾರ್ಥವಾಗಿ ಡಾ. ಅದೀಶ್ ಸಿ. ಅಗರ್ವಾಲ್ ಮತ್ತು ಎಲಿಜಬೆತ್ ಹೊರಾನ್ ಈ ಕೃತಿಯನ್ನು ರಚಿಸಿದ್ದಾರೆ. ಮೋದಿ ಅವರ ಬಾಲ್ಯದ ಅಪರೂಪದ ಚಿತ್ರಗಳ ಪೇಂಟಿಂಗ್ ಮತ್ತು ಬದುಕಿನ ಕೌತುಕ ಘಟನೆಗಳನ್ನು ಪುಸ್ತಕ ಒಳಗೊಂಡಿದೆ.

ಪುಸ್ತಕವು ಹಾರ್ಡ್ ಕವರ್ ಮತ್ತು ಇ-ಬುಕ್ ಆವೃತ್ತಿಗಳಲ್ಲಿ ಲಭ್ಯವಿದ್ದು 20 ಭಾಷೆಗಳಿಗೆ ಅನುವಾದಗೊಂಡಿದೆ. ಹಿಂದಿ, ಕನ್ನಡ, ಅಸ್ಸಾಮಿ, ಬಂಗಾಳಿ, ಗುಜರಾತಿ, ಮರಾಠಿ, ಪಂಜಾಬಿ, ತಮಿಳು, ತೆಲುಗು ಹಾಗೂ ಉರ್ದು ಭಾಷೆಗಳಲ್ಲಿ ಕೃತಿ ಲಭ್ಯವಿದೆ.

ಅಲ್ಲದೆ ಇಂಗ್ಲಿಷ್, ಅರೇಬಿಕ್, ಡಚ್, ಫ್ರೆಂಚ್, ಜರ್ಮನ್, ಇಟಾಲಿಯನ್, ಜಪಾನೀಸ್, ರಷ್ಯನ್, ಸ್ಪ್ಯಾನಿಷ್ ಹಾಗೂ ಮ್ಯಾಂಡರಿನ್- ಒಟ್ಟು 10 ವಿದೇಶಿ ಭಾಷೆಗಳಿಗೆ ಇದು ತರ್ಜುಮೆಗೊಂಡಿದೆ.

## ನಾಳೆ ಸಿಐಐ ವಾರ್ಷಿಕ ಸಭೆ ಉದ್ದೇಶಿಸಿ ಮೋದಿ ಭಾಷಣ

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) 125ನೇ ವಾರ್ಷಿಕೋತ್ಸವಕ್ಕೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಚಾಲನೆ ನೀಡಲಿದ್ದಾರೆ. ಈ ವರ್ಚುವಲ್ ಸಭೆಯಲ್ಲಿ 'ಮತ್ತೆ ಪ್ರಗತಿ ಕಡೆಗೆ ಸಾಗೋಣ' ಎಂಬ ವಿಚಾರದ ಮೇಲೆ ಮೋದಿ ಮಾತನಾಡಲಿದ್ದಾರೆ.

ಪಿರಮಾಲ್ ಗ್ರೂಪ್ ಅಧ್ಯಕ್ಷ ಅಜಯ್ ಪಿರಮಾಲ್, ಐಟಿಸಿ ಲಿಮಿಟೆಡ್‌ನ ಸಿಎಂಡಿ ಸಂಜಯ್ ಪುರಿ, ಬಯೋಕಾನ್ ಸಿಎಂಡಿ ಕಿರಣ್ ಮಜುಂದಾರ್ ಷಾ, ಎಸ್‌ಬಿಐ ಅಧ್ಯಕ್ಷ ರಜನೀಶ್ ಕುಮಾರ್, ಕೋಟಕ್ ಮಹೀಂದ್ರಾ ಬ್ಯಾಂಕ್ ಸಿಇಒ ಉದಯ್ ಕೊಟಾಕ್, ಸಿಐಐ ಅಧ್ಯಕ್ಷ ವಿಕ್ರಂ ಕಿರ್ಲೋಸ್ಕರ್ ಪಾಲ್ಗೊಳ್ಳಲಿದ್ದಾರೆ. ಕೊರೊನಾದಿಂದ ತತ್ತರಿಸಿರುವ ಕೈಗಾರಿಕಾ ವಲಯಕ್ಕೆ ಮರುಜೀವ ನೀಡುವ ಕುರಿತು ಚರ್ಚೆಗಳು ನಡೆಯಲಿವೆ.